Ex.No. 07 /2022
ಆರ್‌ಡಬ್ಲ್ಯೂ - 01
ದಿನಾಂಕಃ 19-12-2025
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀಸವಾಲು - ಅರ್ಜಿದಾರ ಪರ ಶ್ರೀ. ಎಸ್ ಎಸ್ ಎಚ್ ವಕೀಲರಿಂದ.**

ನಿಮ್ಮ ತಂದೆಯವರಿಗೆ ಆರೋಗ್ಯ ಸರಿ ಇಲ್ಲ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದಾದರೂ ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿದ್ದೇನೆ. ಅವರಿಗೆ ಸಕ್ಕರೆ ಕಾಯಿಲೆ, ಕಣ್ಣು ಸರಿಯಾಗಿ ಕಾಣುವುದಿಲ್ಲ ಮತ್ತು ನಡೆಯಲು ಆಗುವುದಿಲ್ಲ. ಈ ಕೇಸನ್ನು ಯಾರು ಯಾರ ಮೇಲೆ ಯಾವ ಕಾರಣಕ್ಕಾಗಿ ಮಾಡಿದ್ದಾರೆ ಎಂದರೆ ಹನಮಂತಪ್ಪ ರವರು ನಮ್ಮ ತಂದೆಯ ವಿರುದ್ಧ ಅವರ ಆಸ್ತಿಗೆ ತೊಂದರೆ ಮಾಡಿದ್ದೇವೆ ಎಂದು ಮಾಡಿದ್ದರೆ. ಈ ಪ್ರಕರಣದಲ್ಲಿ ನಿಮ್ಮ ತಂದೆಯವರು ಏನು ತಕರಾರು ಹಾಕಿದ್ದಾರೆ ಎಂದು ಓದಿ ತಿಳಿದುಕೊಂಡಿದ್ದೀರಾ ಎಂದರೆ ತಿಳಿದುಕೊಂಡಿದ್ದೇನೆ. ಮೂಲ ಅಸಲು ದಾವಾ ನಂ.14/2017 ರಲ್ಲಿ ನಿಮ್ಮ ತಂದೆಗೆ ನ್ಯಾಯಾಲಯದ ಸಮನ್ಸ ಜಾರಿಯಾಗಿದ್ದರು ಅವರು ಹಾಜರು ಆಗಿರಲಿಲ್ಲ ಎಂದರೆ ಜಾರಿಯಾಗಿತ್ತು, ಹಾಜರು ಆಗಿರಲಿಲ್ಲ. ಅಸಲು ದಾವಾ ನಂ.14/2017 ದಿಃ 29-08-2018 ರಂದು ತೀರ್ಪು ಆಗಿರುತ್ತದೆ ಎಂದರೆ ತೀರ್ಪುಆಗಿದ್ದು ನಮಗೆ ಗೊತ್ತಾಗಿರಲಿಲ್ಲ. ದಾವೆಯನ್ನು ಹೂಡಿದ ನಂತರ ಅದರ ತೀರ್ಪು ಹೊರಡಿಸುವ ತನಕ ನಿಮ್ಮ ತಂದೆಯವರು ಏನು ಮಾಡಿದರು ಎಂದು ನಿಮಗೆ ಗೊತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ತಂದೆ ಮತ್ತು ಚಿಕ್ಕಪ್ಪನವರು ನ್ಯಾಯಾಲಯದ ಸಮನ್ಸನ್ನು ಸ್ವೀಕರಿಸಿಕೊಂಡಾಗಿನಿಂದ ಮತ್ತು ತೀರ್ಪು ಪ್ರಕಟವಾಗುವ ತನಕ ತಕರಾರು ಹಾಕಬೇಕು ಎನ್ನುವ ಯಾವುದೇ ಪ್ರಯತ್ನ ಪಟ್ಟಿರುವುದಿಲ್ಲ ಎಂದರೆ ಸರಿ.

2018 ರಿಂದ ಇಲ್ಲಿಯವರೆಗೂ ಅಸಲು ದಾವಾ ನಂ.14/2017 ರ ತೀರ್ಪುನ್ನು ಪ್ರಶ್ನಿಸಲು ನಿಮ್ಮ ತಂದೆ ಮತ್ತು ಚಿಕ್ಕಪ್ಪ ರವರಿಗಾಗಲಿ ಯಾವುದಾದರೂ ತೊಂದರೆ ಇತ್ತಾ ಎಂದು ನಿಮಗೆ ಗೊತ್ತಾ ಎಂದರೆ ಚಿಕ್ಕಪ್ಪ ರವರಿಗೆ ಹುಷಾರು ಇರಲಿಲ್ಲ ಎಂದು ನುಡಿಯುತ್ತಾರೆ. 7 ವರ್ಷದ ತನಕ ನಿಮ್ಮ ತಂದೆ ಮತ್ತು ಚಿಕ್ಕಪ್ಪ ರವರಿಗೆ ಹುಷಾರು ಇರಲಿಲ್ಲ ಎಂದು ತೋರಿಸಲು ಯಾವುದಾದರೂ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿದ್ದೇವೆ ಇಂದಿನಿಂದ 3-4 ವರ್ಷದ ಹಿಂದಿನ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ಆ ರೀತಿಯ ಯಾವುದೇ ದಾಖಲೆಗಳನ್ನು ಹಾಜರುಪಡಿಸಿದೆ ಇದ್ದರು ಪಡಿಸಿದ್ದೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ನಿಮ್ಮ ತಂದೆ ಮತ್ತು ಚಿಕ್ಕಪ್ಪ ರವರಿಗೆ ಸಮನ್ಸ ಜಾರಿಯಾದಾಗಿನಿಂದ, ಇತ್ತೀಚೆಗೆ ನೀವು ಸಲ್ಲಿಸಿದ ಮೇಲ್ಮನವಿ ಸಮಯದಲ್ಲಿ ನಿಮ್ಮ ತಂದೆ ಅಥವಾ ಚಿಕ್ಕಪ್ಪ ಅವರ ವಾರಸುದಾರರು ತೆಗೆದುಕೊಂಡ ಕಾನೂನು ಕ್ರಮದ ಬಗ್ಗೆ ನಿಮಗೆ ಗೊತ್ತಾ ಎಂದರೆ ನನಗೆ ಈ ಪ್ರಕರಣದ ನೋಟಿಸ ಬಂದ ನಂತರ ಗೊತ್ತಾಗಿರುತ್ತದೆ. ಅಸಲು ದಾವಾ ಸಂಖ್ಯೆ 14/2017 ರಲ್ಲಿ ನಿಮ್ಮ ತಂದೆ ಮತ್ತು ನಿಮ್ಮ ಚಿಕ್ಕಪ್ಪನವರು ಯಾವ ವಕೀಲರನ್ನು ನೇಮಿಸಿದ್ದರು ಎಂದರೆ ಎಸ್ ಎ ಕಾಮರೆಡ್ಡಿ, ಅವರನ್ನು ನೇಮಿಸಿದ್ದರು ಅವರು ಮರಣ ಹೊಂದಿದ ಬಳಿಕ ಎಸ್ ಕೆ ಕಾಮರೆಡ್ಡಿ ರವರನ್ನು ನೇಮಿಸಿದ್ದೆವು. ಸದರಿ ವಕೀಲರು ತೀರಿಕೊಂಡ ನಂತರ ಬೇರೆ ವಕೀಲರನ್ನು ನೇಮಿಸಿಕೊಳ್ಳಲು ನಿಮ್ಮ ತಂದೆ ಮತ್ತು ಚಿಕ್ಕಪ್ಪನಿಗೆ ಯಾವುದಾದರೂ ತೊಂದರೆ ಇತ್ತಾ ಎಂದರೆ ನಮ್ಮ ಚಿಕ್ಕಪ್ಪ ರವರಿಗೆ ಹುಷಾರಿಲ್ಲದೆ ತೀರಿಕೊಂಡಿದ್ದರಿಂದ ನಾವು ಬೇರೆ ವಕೀಲರನ್ನು ನೇಮಿಸಲಿಲ್ಲ. ನಿಮ್ಮ ಚಿಕ್ಕಪ್ಪ ರವರಿಗೆ ಹೆಂಡತಿ ಮತ್ತು ಮಕ್ಕಳು ಇದ್ದಾರಾ ಎಂದರೆ ಇದ್ದಾರೆ. ಒಬ್ಬರು ಹೆಂಡತಿ 4 ಜನ ಅಲ್ಪವಯಿ ಮಕ್ಕಳು ಇದ್ದಾರೆ. ನಿಮ್ಮ ಚಿಕ್ಕಪ್ಪ ರವರನ್ನು ಯಾವ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲು ಮಾಡಿದ್ದೀರಿ ಎಂದರೆ ಸುಮಾರು 5 ವರ್ಷದ ತನಕ ಗದಗನ ಸರ್ಕಾರಿ ಅಸ್ಪತ್ರೆಯಲ್ಲಿ ಸೇರಿಸಿದ್ದೇವು. ಮತ್ತು ಕಿಮ್ಸ ಆಸ್ಪತ್ರೆ ಮತ್ತು ಖಾಸಗಿ ಅಸ್ಪತ್ರೆಯಲ್ಲಿಯಾ ಸಹ ಚಿಕಿತ್ಸೆ ಕೊಡಿಸಿದ್ದೇವು. ನಿಮ್ಮ ಚಿಕ್ಕಪ್ಪ ನವರಿಗೆ ಏನು ಆಗಿತ್ತು ಎಂದರೆ ಅವರಿಗೆ ಕಿಡ್ನಿಯ ಸಮಸ್ಸೆ ಆಗಿತ್ತು. ನಿಮ್ಮ ಚಿಕ್ಕಪ್ಪ ರವರನ್ನು ಗದಗನ ಸರ್ಕಾರಿ ಅಸ್ಪತ್ರೆಯಲ್ಲಿ 5 ವರ್ಷಗಳ ತನಕ ಸೇರಿಸಿದ್ದೇವು ಎಂದು ತೋರಿಸಲು ಯಾವುದಾದರೂ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಹಾಜುಪಡಿಸಿದ್ದೇನೆ. ನಿಮ್ಮ ಚಿಕ್ಕಪ್ಪನ ಹೆಸರು ಏನು ಎಂದರೆ ಸಣ್ಣ ಮಾರುತಿ.

ನೀವು ಎಲ್ಲಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೀರಿ ಎಂದರೆ ಎಸ್ ಎಸ್ ಎಲ್ ಸಿ ವರೆಗೂ ಮಾಡಿದ್ದೇನೆ. ಸಾಕ್ಷಿಗೆ ತಾನು ಸಲ್ಲಿಸಿದ ದಾಖಲೆಗಳನ್ನು ತೋರಿಸಿದ್ದು ಇದರಲ್ಲಿ ನಿಮ್ಮ ಚಿಕ್ಕಪ್ಪರವರಿಗೆ ಸಂಬಂಧಪಟ್ಟ ದಾಖಲೆಗಳನ್ನು ತೋರಿಸಿ ಎಂದರೆ ನಾವು ಆ ದಾಖಲೆಗಳನ್ನು ಸಲ್ಲಿಸಿಲ್ಲ ಎಂದು ನುಡಿಯುತ್ತಾರೆ. ಹಾಗಾದರೆ ನಿಮ್ಮ ಚಿಕ್ಕಪ್ಪನನ್ನು ಗದಗ 5 ವರ್ಷದ ತನಕ ಆಸ್ಪತ್ರೆಯಲ್ಲಿ ಸೇರಿಸಿದ್ದೀರಿ ಎಂದು ಸುಳ್ಳು ಹೇಳಿದ್ದೀರಾ ಎಂದರೆ ಸುಳ್ಳು ಹೇಳಿದ್ದೇನೆ. ನಿಮ್ಮ ಚಿಕ್ಕಪ್ಪ ರವರಿಗೆ ಒಳರೋಗಿಯಾಗಿ ಆಸ್ಪತ್ರೆಗೆ ಸೇರುವ ಯಾವುದೇ ಕಾಯಿಲೆ ಇರಲಿಲ್ಲ ಎಂದರೆ ಸರಿಯಲ್ಲ. ನಿಮ್ಮ ಚಿಕ್ಕಪ್ಪರವರಿಗೆ ಯಾವುದೇ ರೋಗಗಳು ಇರದೇ ಇದುದ್ದರಿಂದ ಯಾವುದೇ ವೈದ್ಯಕೀಯ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ಅಸಲು ದಾವಾ ಸಂಖ್ಯೆ 14/2017 ರ ತೀರ್ಪಿನ ಬಗ್ಗೆ ನಿಮಗೆ ಯಾವಾಗ ಗೊತ್ತಾಯಿತು ಎಂದರೆ ಈ ಪ್ರಕರಣದ ನೋಟಿಸ ಬಂದ ನಂತರ ಗೊತ್ತಾಗಿರುತ್ತದೆ. ಅಂದಾಜು 3 ವರ್ಷದ ಹಿಂದೆ.ಅಸಲು ದಾವಾ ಸಂಖ್ಯೆ 14/2017 ರ ತೀರ್ಪಿನ ಬಗ್ಗೆ ನಿಮಗೆ 3 ವರ್ಷದ ಹಿಂದೆ

ಗೊತ್ತಾದ ತಕ್ಷಣ ಮೇಲ್ಮನವಿ ಸಲ್ಲಿಸಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಆ ವೇಳೆಯಲ್ಲಿ ನಮ್ಮ ಚಿಕ್ಕಪ್ಪ ಮತ್ತು ಚಿಕ್ಕಮ್ಮ ರವರಿಗೆ ಹುಷಾರು ಇರಲಿಲ್ಲ. ಅದೇ ವೇಳೆಯಲ್ಲಿ ಅರ್ಜಿದಾರರು ಸಹ ಬಂದ ರಾಜಿಯಾಗೋಣ ಎಂದು ಹೇಳಿದರು ಆದರೆ ರಾಜಿ ಯಾಗದೇ ಇದ್ದುದರಿಂದ ನಾವು ಮೇಲ್ಮಮನವಿಯನ್ನು ಸಲ್ಲಿಸಿರುತ್ತೇವೆ. ಈ ಪ್ರಕರಣದ ನೋಟಿಸ ಬಂದ ಎಷ್ಟು ದಿನಗಳ ನಂತರ ಅರ್ಜಿದಾರರು ರಾಜಿ ಮಾತುಕತೆಗೆ ಬಂದರು ಎಂದರೆ ನೋಟಿಸ ಬಂದ ಒಂದು ವರ್ಷದ ನಂತರ ರಾಜಿ ಮಾತುಕತೆಗೆ ಬಂದಿದ್ದರು. ನಿಮಗೆ ನೋಟಿಸ ಬಂದ ದಿನದಿಂದ ಮತ್ತು ತದ ನಂತರ ಒಂದು ವರ್ಷದ ನಂತರ ಅರ್ಜಿದಾರರು ರಾಜಿಗೆ ಬಂದರು ಎಂದು ನುಡಿದಿದ್ದು ಈ ಒಂದು ವರ್ಷದ ಅವಧಿಯಲ್ಲಿ ಮೇಲ್ಮಮನವಿ ಸಲ್ಲಿಸಲು ನಿಮಗೆ ಏನಾದರೂ ತೊಂದರೆ ಇತ್ತಾ ಎಂದರೆ ಈ ಅವಧಿಯಲ್ಲಿ ನಾವು ರಾಜಿಗೆ ಮಾತುಕತೆ ಮಾಡಿರುತ್ತೇವೆ.

ನಿಮ್ಮ ತಂದೆಯವರಿಗೆ ಈ ಪ್ರಕರಣದ ನೋಟಿಸ ದಿಃ 15-11-2022 ರಂದು ತಲುಪಿರುತ್ತದೆ ಮತ್ತು ನಿಮ್ಮ ತಂದೆಯವರು ದಿಃ 02-12-2022 ರಂದು ನ್ಯಾಯಾಲಯಕ್ಕೆ ವಕೀಲರ ಮುಖಾಂತರ ಹಾಜರು ಆಗಿರುತ್ತಾರೆ ಎಂದರೆ ಸರಿ. ಈ ಪ್ರಕರಣದಲ್ಲಿ ನಿಮ್ಮ ತಂದೆಯವರು ಬಂದ ನಂತರ ನಿಮ್ಮ ವಕೀಲರನ್ನು ಭೇಟಿ ಮಾಡುವುದು ಮಾಡುತ್ತಿದ್ದರು ಎಂದರೆ ಸರಿ. ದಿಃ 02-12-2022 ರಂದು ನಿಮ್ಮ ತಂದೆಯವರು ಈ ಪ್ರಕರಣದಲ್ಲಿ ಹಾಜರಾದರೂ ದಿಃ 20-03-2025 ರ ವರೆಗೂ ಯಾವುದೇ ಮೇಲ್ಮಮನವಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ಮಾಡಿಲ್ಲ. ಅಸಲು ದಾವಾ ಸಂಖ್ಯೆ 14/2017 ರ ತೀರ್ಪಿನ ನಂತರ ಮೇಲ್ಮಮನವಿ ಸಲ್ಲಿಸುವವರೆಗೂ ನಿಮ್ಮ ತಂದೆಯವರಿಗೆ ನ್ಯಾಯಾಲಯಕ್ಕೆ ಬಂದು ಹೋಗಲು ಆಗದಷ್ಟು ಏನಾದರೂ ಅನಾರೋಗ್ಯ ಇತ್ತಾ ಎಂದರೆ ಅವರಿಗೆ ಈಗಿನಿಂದ 3 ವರ್ಷದ ಹಿಂದೆ ಶುಗರ್ ಕಾಯಿಲೆ ಇತ್ತು. ಶುಗರ್ ಕಾಯಿಲೆ ಬಂದರೆ ಯಾವುದೇ ವ್ಯಕ್ತಿಯು ಹಾಸಿಗೆ ಹಿಡಿದು ಮಲಗುವುದಿಲ್ಲ ಎಂದರೆ ಸರಿ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದರಿಂದ ಸಮಯವಕಾಶ ನೀಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.ಸವಣೂರು